ಬೈದರು. ಸುರಭಿ ಭೂಮಿಗಿಳಿದುಹೋದಳು. ಅಷ್ಟು ಜನರೆದುರು ಅವಮಾನವಾಗಿ ಎಲ್ಲರೂ ತನ್ನನ್ನೆ ನೋಡುತ್ತಿರುವಂತೆನಿಸಿ ಆತ್ಮವಿಶ್ವಾಸ ನುಚ್ಚುನೂರಾಗಿಹೋಯ್ತು. ಪ್ಯಾಕಪ್ ಅಂತಹೇಳಿ ನಿರ್ದೇಶಕರು ಕುರ್ಚಿಯಲ್ಲಿ ಕಣ್ಣುಮುಚ್ಚಿ ವಿಶ್ರಾಂತಿಗಿಳಿದರು. ಸ್ವಲ್ಪದೂರ ಮರದ ಮರೆಯಲ್ಲಿ ಹುದುಗಿದವಳೆದುರು ದೊಡ್ಡ ಶೂನ್ಯವಿತ್ತು. ನಟಿಯಾಗುವುದು ತನ್ನ ಮೂರ್ಖತನವಾಗಿತ್ತು, ತನಗೆ ಹೇಳಿಸಿದ್ದಲ್ಲ ಅದೆಲ್ಲ ಅನ್ನುವ ಹತಾಶೆಯಲ್ಲಿ ಮುಂದಿನ ಯಾವ ದಾರಿಯೂ ಕಾಣಿಸುತ್ತಿರಲಿಲ್ಲ. ಎಲ್ಲಾ ಅಂದರೆ ಎಲ್ಲಾ ಮುಗಿದುಹೋಗಿತ್ತು. ಮೊಳಕಾಲಮೇಲೆ ತಲೆಯಿಟ್ಟುಕೊಂಡವಳಿಗೆ ಬಿಕ್ಕಳಿಕೆ ಉಕ್ಕುಕ್ಕಿ ಬಂತು. ಎದುರು ಯಾರೋ ಬಂದಂತಾಗಿ 'ಸುರಭೀ' ಅನ್ನುವ ಮೃದುಸ್ವರಕ್ಕೆ ತಲೆಯೆತ್ತಿದಳು. ಮಧ್ಯವಯಸ್ಸಿನ ತುಸು ಸ್ಥೂಲದೇಹದ ವ್ಯಕ್ತಿ ನಿಂತಿದ್ದರು. ಕಣ್ಣೊರೆಸಿಕೊಂಡು ತಟ್ಟನೆ ಎದ್ದುನಿಂತವಳಿಗೆ 'ಅಳಬೇಡ' ಅಂದರು. 'ಮೊದಲ ಸಲ ಹೀಗಾಗೋದು ಸಹಜ. ಅಭಿನಯಕ್ಕೆ ತರಬೇತಿ ಸಿಗಬೇಕು ನಿಜ. ಆದರೆ, ನಿನ್ನಲ್ಲಿ ಕಲೆ ಸಹಜ ಮುಗ್ಧತೆಯಲ್ಲಿ ಅಡಗಿದೆ, ಹೆದರಿದ್ದೀ ಅಷ್ಟೆ. ನಾನೂ ನಿರ್ದೇಶಕನೆ. ಸೋಮನಾಥ ನಂಗೆ ಗೆಳೆಯ. ನಾನೂ ಒಂದು ಸಿನಿಮಾ ಮಾಡತಿದೀನಿ. ಅದರಲ್ಲಿಯ ಒಂದು ಪಾತ್ರಕ್ಕೆ ನೀನೇ ಸೂಕ್ತ ಅನಿಸಿದೆ. ಅಭಿನಯ ಮಾಡಿಸೋಕೆ ನಾನಿದೀನಿ, ಹೆದ್ರಬೇಡ. ಅದೆಷ್ಟೇ ಸಾರಿ ತಪ್ಪಾಗಲಿ, ಹೇಳಿಕೊಡತೀನಿ, ಮಾಡಿಸ್ತೀನಿ, ಒಪ್ಪಿಗೇನ?' ಉರಿಯುವ ಗಾಯವನ್ನು ಮಾಯಿಸಿಬಿಡಬಲ್ಲ ಮಾಂತ್ರಿಕ ಮುಲಾಮಿತ್ತು ಸ್ವರದಲ್ಲಿ. 'ಈ ವಿಳಾಸಕ್ಕೆ ಬಾ' ಅಂತ ಕಾರ್ಡು ಕೊಟ್ಟು 'ಎಲ್ಲಿ, ನಿನ್ನ ನಂಬರುಕೊಡು' ಅಂತ ಡೈರಿ ತೆಗೆದರು. ಮೋಡಗವಿದ ಕಗ್ಗತ್ತಲ ಒಂಟಿದಾರಿಯಲ್ಲಿ ದೀಪದಹುಳುವೊಂದು ಮಿಂಚಿದಂತೆನಿಸಿತು. ಇನ್ನೂ ಅಳುಕು ಕಾಡುತ್ತಿರುವಂತೆನ್ನಿಸಿದ್ದಕ್ಕೆ, 'ಏ... ಸೋಮು, ಬಾರೋ ಸ್ವಲ್ಪ' ಕರೆದರು. ಎದ್ದು ಇವರತ್ತ ಬಂದ ನಿರ್ದೇಶಕ ಸೋಮನಾಥ, 'ಬೇಜಾರು ಬೇಡಮ್ಮ, ನಾನು ಸ್ವಲ್ಪ ಮುಂಗೋಪಿ, ಹೊಂದಾಣಿಕೆ ಮಡ್ಕೊಳಲ್ಲ. ನಾನು ಅಂದುಕೊಂಡ ಹಾಗೇ ಆಗಬೇಕು. ಇವರು ಜಯರಾಂ. ಒಳ್ಳೊಳ್ಳೆ ಚಿತ್ರಗಳನ್ನ ಮಾಡಿ ಎಷ್ಟೋ ಪ್ರಶಸ್ತಿಗಳನ್ನ ಬಾಚಿಕೊಂಡಿದಾರೆ. ಇವರಾಗೆ ಕರೀತಾರೆ ಅಂದ್ರೆ ಅದು ನಿನ್ನ ಅದೃಷ್ಟ ಅಂದುಕೊ. ನಿನ್ನನ್ನ ನಟಿಯಾಗಿ ರೂಪಿಸ್ತಾರೆ, ಯಾವ ಸಂದೇಹ, ಭಯ ಬೇಡ. ಗುಡ್ ಲಕ್' ಅಂತ ಹಾರೈಸಿದರು. ಜಯರಾಂ, 'ಸಂಜೆಯಾಗತಾ ಬಂತು, ಈಗ ಮನೆಗೆ ಹೋಗು. ನಾಳೆ ತಪ್ಪದೇ ಬಾ. ಅಥವಾ ಫೋನು ಮಾಡ್ಬೇಕಾ?' ನಕ್ಕರು. 'ಬರ್ತೀನಿ ಸರ್' ಕಣ್ಣೊರೆಸಿಕೊಂಡು ಮುಗುಳ್ನಕ್ಕಳು.

ವಿಜಯನಗರದ ಘಟನೆ ಅವಳಲ್ಲಿ ಭಯ ಬಿತ್ತಿತ್ತು. ಮತ್ತೊಬ್ಬ ನಿಜವಾದ ನಿರ್ದೇಶಕರೇ ಹೇಳಿದ್ದಕ್ಕೆ ಜಯರಾಂ ಬಗ್ಗೆ ಸಂದೇಹಪಡಬಾರದು ಅನಿಸಿತು. ಮುಳುಗಿ ಶೂನ್ಯ ಕವಿಯಿತು ಅನ್ನುವಾಗ, ಮರದ ತುಂಡಿನಾಸರೆ ಸಿಕ್ಕು, ಅದು ಕೈತಪ್ಪಿದರೆ ಮತ್ತೊಂದು ಹುಲ್ಲುಕಡ್ಡಿ ಸಿಕ್ಕಿ, ಮುಳುಗಿ ತೇಲಿಸುವ ಆಟ ಒಂದು ಕ್ಷೀಣ ಉಸಿರನ್ನು ಜೀವಂತವಿಡುತ್ತಿತ್ತು. ಜೇಪಿ ನಗರ ನಾಲ್ಕನೇಫೇಸಿನ ಮನೆಯ ಬೆಲ್ಲು ಒತ್ತಿದಾಗ, ಬಾಗಿಲು ತೆಗೆದ ಹುಡುಗ ಹೆಸರು ಕೇಳಿಕೊಂಡು, ಬನ್ನಿ ಅಂತ ಮೊದಲಮಹಡಿಗೆ ಕರೆದೊಯ್ದ. ದೊಡ್ಡ ಹಾಲು, ಶೆಲ್ಫುಗಳಲ್ಲಿ ಪ್ರಶಸ್ತಿ ಫಲಕಗಳು, ಫೈಲುಗಳು, ಚಿತ್ರಗಳು, ಪುಸ್ತಕಗಳು ತುಂಬಿದ್ದವು. ದೊಡ್ಡ ಮೇಜಿನೆದುರು ಮೆತ್ತೆಯನ್ನಳವಡಿಸಿದ ಖುರ್ಚಿಗಳು. ಏನೋ ಬರೆಯುತ್ತಿದ್ದ ಜಯರಾಂ, 'ಬಾಮ್ಮ ಕುಳಿತುಕೋ' ಅಂತ ಕರೆದರು. ಕಾಫಿ ಬಂತು. ಆಮೇಲೆ ಬಂದ ಪ್ರೊಡಕ್ಷನ್ ಮೇನೇಜರ್, ಅಸಿಸ್ಟಂಟ್‌ಗಳಿಗೆಲ್ಲರಿಗೆ ಪರಿಚಯ ಮಾಡಿಸಿದರು. ಒಬ್ಬ ಕ್ಯಾಮರಾವನ್ನು ಸುರಭಿಯ ಮುಖದ ಮೇಲೆ ಬೇರೆಬೇರೆ ಕೋನಗಳಲ್ಲಿ ಕೇಂದ್ರೀಕರಿಸುತ್ತ ಹೋದ. ಜಯರಾಂ ಕಂಪ್ಯೂಟರ್ ಪರದೆಯ ಮೇಲೆ ವೀಕ್ಷಿಸಿ ಸಾಕು ಅಂದರು.